| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 20 ನಿ | ಕನ್ನಡ : ಬುದ್ಧಿವಂತ ಮಂತ್ರಿ | * ಸರಿಯಾದ ರೂಪ ಅನುಕ್ರಮದೊಂದಿಗೆ ............................................<br>* ಪದಗಳ ನಡುವೆ ಇರುವ .................................................................. | ಪದಗಳ ಮಿಂಚುಪಟ್ಟಿಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ವಾಚನ ಮಾಡಿದ ಗದ್ಯಭಾಗವನ್ನು ಕಥೆಯ ರೂಪದಲ್ಲಿ ವಿವರಿಸಿ ಹೇಳುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | ಹೊಸಪದಗಳಿಗೆ ಅರ್ಥಬರೆದ ಮಿಂಚುಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>3ನೇ ತರಗತಿಯ ಮಕ್ಕಳಿಗೆ ಹೇಳಿದ ಕಥೆಯನ್ನು ಆಲಿಸಿ ಅರ್ಥೈಸಿಕೊಳ್ಳುವರು. |
| | 20 ನಿ | | | | ಹಿರೇಮಣಿ | ಅಭ್ಯಾಸದಲ್ಲಿರುವ ಪ್ರಶ್ನೆಗಳನ್ನು ಹೊಂದಿಸಿ ಬರೆಯುವುದು, ವಾಕ್ಯಗಳನ್ನು ಸರಿಪಡಿಸಿ ಬರೆಯುವ ಚಟುವಟಿಕೆಗಳನ್ನು ಮಾಡಿಸುವರು. | | | | ಶಿಕ್ಷಕರು | "ಸೂರ್ಯಾಸ್ತ ಸಮಯ ಕಿತ್ತೂರಿನ .........................................<br>..............................................................................<br>.................................................................... ಎಂದು ಗರ್ಜಿಸಿದ".<br>ಈವರೆಗಿನ ಘಟಕ ಭಾಗವನ್ನು ಸ್ವರಭಾರ ಏರಿಳಿತದೊಂದಿಗೆ ಶಿಕ್ಷಕರು ಓದುವರು. ನಂತರ ಮಕ್ಕಳಿಗೆ ಮೌನ ಓದು ಕೊಟ್ಟು ಹೊಸ ಪದಗಳ ಪಟ್ಟಿ ಮಾಡಲು ತಿಳಿಸುವರು. |
| | 20 ನಿ | | | | ಹಿರೇಮಣಿ | ಹಿರೇಮಣಿ ಹೊಸಪದಗಳನ್ನು ಕಪ್ಪುಹಲಗೆ ಮೇಲೆ ಬರೆದು ಸ್ವಂತ ವಾಕ್ಯ ರಚಿಸಲು ತಿಳಿಸುವರು. | ಜೀವನ ವಿಜ್ಞಾನ<br>ವೈಯಕ್ತಿಕ ಸ್ವಚ್ಛತೆ | ಮಕ್ಕಳಲ್ಲಿ ವೈಯಕ್ತಿಕ ಸ್ವಚ್ಛತೆಯ ಅರಿವು ಮೂಡಿಸುವುದು. | | ಶಿಕ್ಷಕರು | ಮಕ್ಕಳಿಂದ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆಗಳನ್ನು ಪಟ್ಟಿ ಮಾಡಿಸುವರು. |
| | 20 ನಿ | | | | ಶಿಕ್ಷಕರು | * ಪದಗಳ ಪಟ್ಟಿ ನೇತು ಹಾಕಿ ಗುಂಪಿಗೆ ಸೇರದ ಪದಗಳನ್ನು ಆರಿಸಿ ಬರೆಯಲು ತಿಳಿಸುವರು.<br>* ಅಭ್ಯಾಸದಲ್ಲಿರುವ ಎರಡು ವಾಕ್ಯದಲ್ಲಿ ಉತ್ತರ ಬರೆಯಿರಿ ಎನ್ನುವ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | | | | ಹಿರೇಮಣಿ | ಮಕ್ಕಳು ಪಟ್ಟಿ ಮಾಡಿರುವ ಅಂಶಗಳ ಜೊತೆಗೆ ಪೂರಕವಾದಂತೆ ಪರಸ್ಪರ ಚರ್ಚಿಸುವರು. ವೈಯಕ್ತಿಕ ಸ್ವಚ್ಛತೆಗೆ ಹೆಚ್ಚು ಗಮನ ಕೊಡುವ ಬಗ್ಗೆ ತಿಳಿಯುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 20 ನಿ | ಜೀವನ ವಿಜ್ಞಾನ : ಆತಿಥ್ಯ | ಮಕ್ಕಳಲ್ಲಿ ಮನೆಗೆ ಬಂದ ಅತಿಥಿಗಳನ್ನು ಸ್ವಾಗತಿಸಿ, ಸನ್ಮಾನಿಸುವ ಗುಣ ಬೆಳೆಸುವುದು. | | ಶಿಕ್ಷಕರು | ಮಕ್ಕಳಿಗೆ ಗೊತ್ತಿರುವ ಸ್ಥಳೀಯ ಕಥೆಗಳನ್ನು ಹೇಳಿಸುವರು. | ಗಣಿತ ಸಂಖ್ಯೆಗಳು ಮತ್ತು ಪೂರ್ಣಾಂಕಗಳು | ನಿಮಗಿದು ತಿಳಿದಿದೆಯೇ? ಜೊತೆ ಸ್ನೇಹಿತ ಸಂಖ್ಯೆಗಳೆಂದರೆ ಏನಿರಬಹುದು? ಸ್ವಮೌಲ್ಯಮಾಪನಕ್ಕಾಗಿ ಚಟುವಟಿಕೆ ಮಾಡಿಸುವುದು. | ಪಠ್ಯಪುಸ್ತಕದಲ್ಲಿರುವ ಅಭ್ಯಾಸದ ಲೆಕ್ಕಗಳು. | ಹಿರೇಮಣಿ | ಈ ಹಿಂದಿನ ಅವಧಿಯಲ್ಲಿ ಮಕ್ಕಳು ಮಾಡಿದ ಚಟುವಟಿಕೆಗಳಿಗೆ ಪೂರಕವಾದ ಚಟುವಟಿಕೆಗಳನ್ನು ಮಾಡಿಸುವರು. |
| | 20 ನಿ | | | ಚಿತ್ರ ಕಥಾಪುಸ್ತಕಗಳು | ಹಿರೇಮಣಿ | ಶಿಕ್ಷಕರು ಹೇಳಿಸಿದಂತೆ ಕಥೆ ಮುಂದುವರಿಸುವರು. | | | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 17ರಲ್ಲಿಯ ಲೆಕ್ಕಗಳನ್ನು ಈ ಹಿಂದಿನ ಅವಧಿಗಳಲ್ಲಿ ತಿಳಿದಿರುವ ವಿಷಯಗಳಿಗೆ ಅನುಗುಣವಾಗಿ ಮಾಡಿಸುವರು.<br>ಮಕ್ಕಳಿಗೆ ಯಾವ ಸಮಸ್ಯೆಗಳನ್ನು ಬಿಡಿಸುವಲ್ಲಿ ಸಮಸ್ಯೆ ಯಾಗುವುದು ಅವುಗಳ ಬಗ್ಗೆ ಪುನರಾವರ್ತನೆ ಪಾಠ ಮಾಡುವರು. |
| | 40 ನಿ | | | ಕಥೆ ಪುಸ್ತಕ | ಶಿಕ್ಷಕರು | ಒಂದೇ ಗಿಳಿಯ ಎರಡು ಮರಿಗಳಲ್ಲಿ ಒಂದು ಋಷಿ ಆಶ್ರಮದಲ್ಲಿ ಹಾಗೂ ಮತ್ತೊಂದು ಬೇಡನ ಬಳಿ ಬೆಳೆದಾಗ ಅವುಗಳ ವರ್ತನೆ ಹೇಗೆ ಇರುತ್ತದೆ ಎರಡು ಸ್ವಾರಸ್ಯವಾಗಿ ಕಥೆಯನ್ನು ಹೇಳುತ್ತಾ "ಅತಿಥಿ ದೇವೋಭವ" ಎಂಬ ವಿಷಯವನ್ನು ಹಾಗೂ ಅತಿಥಿಗಳನ್ನು ಸತ್ಕರಿಸುವ ವಿಧಾನವನ್ನು ತಿಳಿ ಹೇಳುವರು. | ಜೀವನ ವಿಜ್ಞಾನ : ಅಹಿಂಸೆ | * ಅಹಿಂಸಾ ಮನೋಭಾವನೆಯಿಂದ ಉಂಟಾಗುವ ಮನೋಪರಿವರ್ತನೆಯ ಬಗ್ಗೆ ತಿಳಿವರು. | * ಗ್ರಂಥಾಲಯದ ಮಸ್ತಕಗಳು, (ಗಾಂಧೀ ಚರಿತ್ರೆ) | ಹಿರೇಮಣಿ | ಅಹಿಂಸೆ ಆಚರಣೆಯ ಬಗ್ಗೆ ಗಾಂಧೀಜಿಯವರು ಅನುಸರಿಸಿರುವ ಕ್ರಮಗಳನ್ನು ಪುಸ್ತಕದಲ್ಲಿ ಸಂಗ್ರಹಿಸಿ ಎಲ್ಲರಿಗೂ ಕೇಳುವ ಹಾಗೆ ಓದುವುದು. ಅಹಿಂಸೆ ಬಗ್ಗೆ ತಿಳಿಯುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ | ಪರಿಸರ ಅಧ್ಯಯನ : ನಮ್ಮ ಸುತ್ತಲಿನ ಜೀವಿಗಳು | * ಸಸ್ಯಗಳು ಮತ್ತು ಪ್ರಾಣಿಗಳ ದೇಹದ ಭಾಗಗಳ ಬಗ್ಗೆ ಹಾಗೂ ಅವುಗಳ ಆಕಾರದಲ್ಲಿ ವ್ಯತ್ಯಾಸವಿದೆ ಎಂಬ ಕಲ್ಪನೆ ಬಗ್ಗೆ ಅರಿಯುವರು. | * ಸಸ್ಯ ಮತ್ತು ಪ್ರಾಣಿಗಳ ಚಿತ್ರಪಟಗಳು<br>* ಪ್ರಾಣಿ ಮತ್ತು ಸಸ್ಯ ದೇಹದ ಬಿಡಿ ಭಾಗಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ವಿಷಯದ ಬಗ್ಗೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | | | | ಶಿಕ್ಷಕರು | **ಕಲಿಕಾಂಶ ಚಟುವಟಿಕೆ**<br>* ಕಪ್ಪು ಹಲಗೆಯ ಮೇಲೆ ಸಸ್ಯದ ಚಿತ್ರಪಟವನ್ನು ಅಂಟಿಸಿ, ಮಕ್ಕಳೊಡನೆ ಚರ್ಚಿಸುತ್ತಾ ಭಾಗಗಳನ್ನು ಗುರ್ತಿಸುವರು.<br>* ಅದರ ಪಕ್ಕದಲ್ಲಿ ಒಂದು ಪ್ರಾಣಿಯ ಚಿತ್ರಪಟವನ್ನು ಅಂಟಿಸಿ ಮಕ್ಕಳೊಂದಿಗೆ ಚರ್ಚಿಸುತ್ತಾ ಆ ಪ್ರಾಣಿಯ ಭಾಗಗಳನ್ನು ಗುರ್ತಿಸುವರು.<br>* ಕ.ಹ. ಮೇಲೆ ಅಂಟಿಸಲಾದ ಸಸ್ಯ ಮತ್ತು ಪ್ರಾಣಿಯ ಭಾಗಗಳನ್ನು ಹೋಲಿಸಿ ಅವುಗಳ ವ್ಯತ್ಯಾಸವನ್ನು ತಿಳಿಸುವರು. | | | | | |
| | 20 ನಿ | | | | ಶಿಕ್ಷಕರು | * ಸಸ್ಯ ಮತ್ತು ಪ್ರಾಣಿಗಳ ದೇಹದ ಭಾಗಗಳ ಮಿಂಚುಪಟ್ಟಿಗಳನ್ನು ಕೊಟ್ಟು ಜೋಡಿಸಲು ಹೇಳುವರು.<br>* ರುಂಡಕ್ಕೆ ಮುಂಡ ಜೋಡಿಸುವ ಆಟ ಆಡಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ<br>ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸುವ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ<br>ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸುವ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | * ಚಿಹ್ನೆ ಬಳಸಿ ಹೆಚ್ಚು, ಕಡಿಮೆ, ಸಮ, ಗುರುತಿಸುವರು.<br>* ಚಿಹ್ನೆಗನುಸಾರವಾಗಿ ಹೆಚ್ಚಿಕೆ ರೂಪದಲ್ಲಿ ಬರೆಯುವರು.<br>* ಚಿಹ್ನೆ ಮತ್ತು ಸಂಖ್ಯೆಗಳನ್ನು ಬಳಸಿ ಖಾಲಿ ಜಾಗ ತುಂಬುವರು. | * ಅಂಕೆಗಳು ಮತ್ತು<br>* ಚಿಹ್ನೆಗಳು ಮಿಂಚು ಪಟ್ಟಿಗಳು | ಶಿಕ್ಷಕರು | ಪಠ್ಯಪುಸ್ತಕದಲ್ಲಿರುವ ಪುಟಸಂಖ್ಯೆ 34, 35, 36ರಲ್ಲಿನ ಅಭ್ಯಾಸ ಲೆಕ್ಕಗಳನ್ನು ಕಪ್ಪುಹಲಗೆಯ ಮೇಲೆ ಮಾದರಿಯಂತೆ ಮಾಡಿಸುತ್ತಾ ನಂತರ ತಪ್ಪಿದ್ದನ್ನು ತಿದ್ದುತ್ತಾ ಮಕ್ಕಳಿಗೆ ಸ್ಪಷ್ಟವಾಗಿ ಈ ಸಾಮರ್ಥ್ಯಗಳನ್ನು ಬೆಳೆಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 40 ನಿ | ಕಾ.ಉ.ಉ.ಶಿ | ದಾಳ ತಯಾರಿಕೆಯನ್ನು ಕಲಿಯುವರು. | * ಕೆ.ಜಿ. ಶೀಟ್<br>* ಅಳತೆಪಟ್ಟಿ<br>* ಕತ್ತರಿ<br>* ಗೋಂದು | ಶಿಕ್ಷಕರು | **ವಿಧಾನ :**<br>ಮೊದಲು ಕೆ.ಜಿ. ಕಾರ್ಡ್‌ಶೀಟನ್ನು ತೆಗೆದುಕೊಂಡು 5" x 3" ಅಳತೆಯಲ್ಲಿ ಗುರುತಿಸಿಕೊಂಡು ಒಮ್ಮೆ ಅದನ್ನು ಮಡಚಿಕೊಂಡು ಎರಡೂ ಕೊನೆಗಳ ಅಂಚುಗಳನ್ನು ಮಧ್ಯದ ಅಂಚನ್ನು ಬಿಟ್ಟು ಕತ್ತರಿಸಿ ಹಾಕುವುದು ನಂತರ ಮಧ್ಯದ ಭಾಗದ ತುದಿ ಮೇಲೆ ಗೋಂದನ್ನು ಅಂಟಿಸಿ ಎರಡೂ ತುದಿಗಳನ್ನು ಕೂಡಿಸಿ ಮಡಚಿದ ಭಾಗಗಳನ್ನು ಕೂರಿಸುತ್ತಾ ಗೋಂದು ಹಾಕುತ್ತಾ ಹೋದರೆ ದಾಳ ತಯಾರಾಗುತ್ತದೆ.<br> | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 20 ನಿ | ಕನ್ನಡ : ಬುದ್ಧಿವಂತ ಮಂತ್ರಿ | * ಸರಿಯಾದ ರೂಪ ಅನುಕ್ರಮದೊಂದಿಗೆ ಅಕ್ಷರಗಳು ಹಾಗೂ ಪದಗಳ ಮಧ್ಯೆ ಸೂಕ್ತ ಜಾಗದೊಂದಿಗೆ ಬರೆಯುವುದು.<br>* ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು. | | ಶಿಕ್ಷಕರು | ಶ್ರೀಕೃಷ್ಣದೇವರಾಯ ಮತ್ತು ತೆನಾಲಿ ರಾಮನ ಕಥೆಯನ್ನು ಹೇಳುವರು. | ಕನ್ನಡ<br>ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | | ಶಿಕ್ಷಕರು | 3ನೇ ತರಗತಿಗೆ ಹೇಳಿದ ಕಥೆಯನ್ನು ಆಲಿಸುವರು. |
| | 30 ನಿ | | | | ಹಿರೇಮಣಿ | **ಅಭ್ಯಾಸ ಚಟುವಟಿಕೆ ಹಂತ**<br>ಗದ್ಯ ಭಾಗದ "ವಿಜಯನಗರದ ಸಾಮ್ರಾಟ ........................................................ ಪರೀಕ್ಷಿಸುವ ಬಯಕೆ ಉಂಟಾಯಿತು".<br>ಈ ಗದ್ಯಭಾಗವನ್ನು ಎಲ್ಲ ಮಕ್ಕಳಿಂದಲೂ ಓದಿಸಲು ಮಾರ್ಗದರ್ಶನ ಕೊಡುವರು. ಎಲ್ಲ ಮಕ್ಕಳೂ ತಪ್ಪಿಲ್ಲದೆ ಓದಲು ಸಹಾಯ ನೀಡುವರು. | | | | ಶಿಕ್ಷಕರು | **ಕಲಿಕಾ ಚಟುವಟಿಕೆ**<br>"ಸೂರ್ಯಾಸ್ತ ಸಮಯ ............................................................ ಎಂದು ಗರ್ಜಿಸಿದ"<br>ಈ ಗದ್ಯಭಾಗವನ್ನು ಓದುತ್ತಾ ಓದಿನಲ್ಲಿ ಪಟ್ಟಿ ಮಾಡಿದ ಹೊಸ ಪದಗಳ ಅರ್ಥ ತಿಳಿಸುವರು.<br>* ಸೂರ್ಯಾಸ್ತ : ಸೂರ್ಯ ಮುಳುಗುವ ಸಮಯ<br>* ಕೋವಿ : ಬಂದೂಕು<br>* ದಾಸ್ಯ : ಸೆರೆಯಾಗು......... ಇತ್ಯಾದಿ |
| | 40 ನಿ | | | | ಶಿಕ್ಷಕರು | * ಮೇಲೆ ತಿಳಿಸಿದ ಗದ್ಯಭಾಗದಲ್ಲಿ ಬರುವ ಹೊಸ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವರು. | ಜೀವನ ವಿಜ್ಞಾನ<br>ಕೃತಜ್ಞತೆ | ಕೃತಜ್ಞತಾ ಮನೋಭಾವನೆಯನ್ನು ಮೂಡಿಸುವುದು. | ಕಥೆ ಪುಸ್ತಕ | ಹಿರೇಮಣಿ | ಇಲಿ ಮತ್ತು ಸಿಂಹದ ಕಥೆಯನ್ನು ಭಾವಭಿನಯದೊಂದಿಗೆ ಹಿರೇಮಣಿ ಹೇಳುವುದು.<br>ಈ ಕಥೆಯ ನೀತಿಯನ್ನು ಮಕ್ಕಳಿಗೆ ಹೇಳುವುದು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 40 ನಿ | **ಜೀವನ ವಿಜ್ಞಾನ : ಪ್ರಾಮಾಣಿಕತೆ** | * ಪ್ರಾಮಾಣಿಕತೆಯ ಅಂಶವನ್ನು ಅಳವಡಿಸಿಕೊಳ್ಳುವ ಮನೋಭಾವ ಹೊಂದುವರು. | ಪಂಚ ತಂತ್ರದ ಕಥೆಯ ಪುಸ್ತಕ | ಶಿಕ್ಷಕರು | ಒಂದು ರಾಜ್ಯದಲ್ಲಿ ಒಬ್ಬ ರಾಜ ಆಳುತ್ತಿದ್ದನು. ಅವನು ಒಂದು ದಿನ ಕಾಡಿನಲ್ಲಿ ಬೇಟೆಯಾಡಿಕೊಂಡು ತನ್ನ ರಾಜ್ಯಕ್ಕೆ ಹಿಂತಿರುಗಿ ತನ್ನ ತೋಟದಲ್ಲಿ ವಿಶ್ರಮಿಸಿ ಕೊಳ್ಳುತ್ತಿದ್ದನು. ಆಗ ಆ ತೋಟದ ಕಾವಲುಗಾರನಿಗೆ "ಈ ತೋಟದಲ್ಲಿರುವ ರುಚಿ ರುಚಿಯಾದ ಹಣ್ಣುಗಳನ್ನು ಕಿತ್ತು ತೆಗೆದುಕೊಂಡು ಬಾ" ಎಂದು ಹೇಳಿದನು. ಕಾವಲುಗಾರ ರಾಜನ ಆಜ್ಞೆಯಂತೆ ಹಣ್ಣುಗಳನ್ನು ಕಿತ್ತುಕೊಂಡು ಬಂದನು. ಆ ಹಣ್ಣುಗಳನ್ನು ರಾಜ ತಿನ್ನಲು ಪ್ರಾರಂಭಿಸಿದನು. ಹಣ್ಣುಗಳಲ್ಲಿ ಕೆಲವು ಕಹಿ, ಹುಳಿ, ಮತ್ತು ಒಗರು ರುಚಿ ಹೊಂದಿದ್ದವು. ಆಗ ರಾಜನು ಆ ಕಾವಲುಗಾರನನ್ನು ಕರೆಸಿ ನಾನು ರುಚಿಯಾದ ಹಣ್ಣು ತರಲು ಹೇಳಿದರೆ ಈ ರೀತಿಯ ಹಣ್ಣುಗಳನ್ನು ತಂದಿರುವೆಯಾ ಎಂದು ಅವನನ್ನು ಗಡಿಪಾರು ಮಾಡಲು ತಿಳಿಸಿದನು. ಆಗ ಆ ಸೇವಕ ಕೊನೆಯದಾಗಿ ರಾಜರಲ್ಲಿ ಒಂದು ಮಾತನ್ನು ಕೇಳಿಕೊಂಡನು. ಮಹಾರಾಜರೇ ನಾನು ಈ ತೋಟದ ಕಾವಲುಗಾರನಷ್ಟೆ ಹೊರತು ಈ ತೋಟದ ಹಣ್ಣುಗಳನ್ನು ನಾನೆಂದು ತಿಂದಿಲ್ಲ. ಆದ್ದರಿಂದ ನನಗೆ ಯಾವ ಹಣ್ಣು ಸಿಹಿ, ಯಾವ ಹಣ್ಣು ಕಹಿ ಎಂದು ತಿಳಿಯಲಿಲ್ಲ ನನ್ನನ್ನು ಕ್ಷಮಿಸಿ ಎಂದು ಹೇಳಿದನು. ಅವನ ಪ್ರಾಮಾಣಿಕತೆಗೆ ರಾಜ ಮೆಚ್ಚಿದನು. (ಇದು ಸೂಚಿತ ಕಥೆ, ಇದನ್ನು ರಸವತ್ತಾಗಿ ಹೇಳಬೇಕು). | ಗಣಿತ<br>ಸಂಖ್ಯೆಗಳು ಮತ್ತು ಪೂರ್ಣಾಂಕಗಳು | * ಸ್ವ ಮೌಲ್ಯಮಾಪನಕ್ಕಾಗಿ ಚಟುವಟಿಕೆ ಅರಿಯುವರು. | ಅಭ್ಯಾಸದ ಲೆಕ್ಕಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ನಡೆಸಿದ ಚಟುವಟಿಕಾ ಲೆಕ್ಕಗಳನ್ನು ಸ್ವ ಮೌಲ್ಯಮಾಪನಕ್ಕಾಗಿ ಪುಟಸಂಖ್ಯೆ 17ರಲ್ಲಿಯ ಲೆಕ್ಕಗಳನ್ನು ಮಾಡಿಸುವಂತೆ ಶಿಕ್ಷಕರು ಸೂಚಿಸುವರು.<br>ಹಿರೇಮಣಿ ಮೇಲಿನ ಚಟುವಟಿಕೆ ಮಾಡಿಸುವರು. |
| | 40 ನಿ | **ಸಾ.ಉ.ಉ.ಕಾ** | * ಎಲೆಗಳ ಸಂಗ್ರಹಣೆ ಮಾಡುವುದು | | ಶಿಕ್ಷಕ | ಶಾಲೆಯ ಪರಿಸರದಲ್ಲಿ ಸಿಗುವ ವಿವಿಧ ರೀತಿಯ ವಿವಿಧ ಮಾದರಿಯ ಎಲೆಗಳನ್ನು ಸಂಗ್ರಹಿಸುವರು.<br>ಅವುಗಳನ್ನು ನೆರಳಿನಲ್ಲಿ ಒಣಗಿಸಲು ಮಾರ್ಗದರ್ಶನ ನೀಡುವರು.<br>ನಂತರ ಅವುಗಳನ್ನು ಡ್ರಾಯಿಂಗ್ ಹಾಳೆಯ ಮೇಲೆ ಅಂಟಿಸುವಂತೆ ಸೂಚಿಸುವರು. | | | | | ಕೇಳಿ-ಕಲಿ ಪಾಠ ಕೇಳಿಸುವರು |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ<br>ವಿಷಯ ಮತ್ತು ಘಟಕ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ<br>ವಿಷಯ ಮತ್ತು ಘಟಕ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 30 ನಿ | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | * ಹೆಚ್ಚು ಕಡಿಮೆ, ಸಮ ............ | * 1 ರಿಂದ 999 ರ ಸಂಖ್ಯೆಗಳ ಮಿಂಚುಪಟ್ಟಿ<br>* >, <, = ಗಳ ಮಿಂಚುಪಟ್ಟಿ<br>* ಆಟದ ಬೋರ್ಡ್ | ಶಿಕ್ಷಕರು | ಶಿಕ್ಷಕರು ಪುಟಸಂಖ್ಯೆ 37 ಮತ್ತು 38ನ್ನು ತೆಗೆದುಕೊಂಡು ಅದರಲ್ಲಿ ಸೂಚಿಸಿರುವಂತೆ ಪ್ರತಿ ಬಾರಿ 4 ಮಕ್ಕಳನ್ನು ಬಳಸಿಕೊಂಡು ಈ ಆಟವನ್ನು ಆಡಿಸುವರು. ನಂತರ ಉತ್ತಮವಾಗಿ ಆಟಗಳಲ್ಲಿ ಭಾಗವಹಿಸಿದಂತಹ ಮಗುವಿಗೆ ಪ್ರಶಂಸಿಸಿ ಎಲ್ಲಾ ಮಕ್ಕಳನ್ನು ಉತ್ತೇಜನಗೊಳಿಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 10 ನಿ | | | * ಮಿಂಚು ಪಟ್ಟಿಗಳು | ಶಿಕ್ಷಕರು | ಪುಸ್ತಕದಲ್ಲಿರುವ ಸೂಚನೆಯಂತೆ "ಢಮಢಮ ಢಮರುಗ" ಚಟುವಟಿಕೆ ಮಾಡಿಸುವರು. (ಪುಟ 38) | | | | | |
| | 40 ನಿ | | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮ | | | | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4ನೇ ಅವಧಿ** | 40 ನಿ | **ಪರಿಸರ ಅಧ್ಯಯನ :**<br>*** ನಮ್ಮ ಸುತ್ತಲಿನ ಜೀವಿಗಳು** | * ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವರು.<br>* ಅವುಗಳ ನಡುವಿನ ಹೋಲಿಕೆಗಳನ್ನು ಮತ್ತು ವ್ಯತ್ಯಾಸಗಳನ್ನು ತಿಳಿಯುವರು. | | ಶಿಕ್ಷಕರು | * ಮಕ್ಕಳನ್ನು ಈಗಾಗಲೇ ಕಲಿತಿರುವ ವಿಷಯಗಳ ಬಗ್ಗೆ ಚರ್ಚಿಸುತ್ತಾ ಪಾಠದ ಕಡೆಗೆ ಗಮನಹರಿಸುವಂತೆ ಮಾಡಿ ಈಗಾಗಲೇ ಅಭ್ಯಸಿಸಿರುವಂಹ ಪಾಠಗಳಲ್ಲಿ ಬರುವಂತಹ * ನೆನಪಿಡು, * ನಿನಗಿದು ಗೊತ್ತೆ ಚಟುವಟಿಕೆಗಳನ್ನು ಅಭ್ಯಸಿಸು ವುದರ ಮೂಲಕ ಪುನರ್‌ಮನನ ಮಾಡಿಸುವರು. (ಪುಟ 12 ಮತ್ತು 13) | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 40 ನಿ | | | | ಶಿಕ್ಷಕರು | **"ಪುರ್" ಆಟ**<br>ಪಠ್ಯಪುಸ್ತಕದ ಆಟ–ಆಡು ಚಟುವಟಿಕೆಯಲ್ಲಿ ಬರುವಂತಹ ಈ "ಪುರ್ ಆಟ" ಚಟುವಟಿಕೆಯನ್ನು ಪಠ್ಯಪುಸ್ತಕದಲ್ಲಿ ಸೂಚಿಸಿರುವಂತೆ ಆಡಿಸುವರು. (ಪುಟ 14) | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ : ಬುದ್ಧಿವಂತ ಮಂತ್ರಿ (ಮುಂದುವರಿಕೆ) | * ಸರಿಯಾದ ರೂಪ ಅನುಕ್ರಮದೊಂದಿಗೆ ..........<br>* ಪದಗಳ ನಡುವೆ ಇರುವ .......... | | ಶಿಕ್ಷಕರು | ಹಿಂದಿನ ದಿನದ ಕಥೆಯನ್ನು ಪುನರ್ ಮನನ ಮಾಡುವುದು. ಅಥವಾ ಮಕ್ಕಳಿಂದ ಹೇಳಿಸುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | | ಶಿಕ್ಷಕರು | 3ನೇ ತರಗತಿಗೆ ಹೇಳಿದ ಕಥೆಯನ್ನು ಆಲಿಸುವರು. |
| | 30 ನಿ | | | | ಹಿರೇಮಣಿ | **ಕಲಿಕಾ ಚಟುವಟಿಕೆ**<br>"ವಿಜಯನಗರದ ಅರಸರಿಗೆ ಕಳಿಂಗ ರಾಜ .......... .......... ದಿಕ್ಕು ತೋರದಾಗಿ ಕಳವಳಗೊಂಡರು".<br>ಈ ಗದ್ಯಭಾಗವನ್ನು ಮಕ್ಕಳಿಂದ ಹಿರೇಮಣಿಯು ತಪ್ಪಿಲ್ಲದೆ ಓದಿಸುವನು. | | | * ಯುದ್ಧದ ಸನ್ನಿವೇಶದ ಚಿತ್ರಪಟ | ಶಿಕ್ಷಕರು | **ಕಲಿಕಾ ಚಟುವಟಿಕೆ**<br>"ಹರ ಹರ ಮಹದೇವ .......... .......... ಕಾವಲು ಸೈನ್ಯವನ್ನು ಸದೆ ಬಡಿದರು".<br>ಈ ಗದ್ಯಭಾಗವನ್ನು ಸ್ವರಭಾರ ಏರಿಳಿತದೊಂದಿಗೆ ಓದುವರು ಮತ್ತು ಚಿತ್ರಪಟದ ಸಹಾಯದಿಂದ ಯುದ್ಧದ ಸನ್ನಿವೇಶವನ್ನು ವಿವರಿಸುವರು. |
| | 40 ನಿ | | | | ಶಿಕ್ಷಕರು | * ಈ ಗದ್ಯಭಾಗವನ್ನು ಎಲ್ಲ ಮಕ್ಕಳಿಂದ ಓದಿಸುವರು. ಹಾಗೂ ನಕಲು ಮಾಡಿಸುವರು. | ಜೀವನ ವಿಜ್ಞಾನ : ಸೃಜನಶೀಲತೆ | * ಪತ್ರ ಲೇಖನ ಸಾಮರ್ಥ್ಯ ಬೆಳೆಸುವುದು. | ಪತ್ರಗಳು | ಹಿರೇಮಣಿ | ಮಕ್ಕಳಿಗೆ ಶಾಲಾ ಪ್ರಾರಂಭೋತ್ಸವವನ್ನು ಕುರಿತು ತನ್ನ ಗೆಳೆಯನಿಗೆ ಒಂದು ಪತ್ರವನ್ನು ಬರೆಯುವ ರೀತಿಯನ್ನು ಹೇಳಿಕೊಡುವರು. ಪತ್ರ ಬರವಣಿಗೆಯ ಎಲ್ಲಾ ಸೂಚನೆಗಳನ್ನು ಕೊಡುವರು.<br>ನಂತರ ಶಿಕ್ಷಕರು ಕೊಟ್ಟ ಸೂಚನೆಯಂತೆ ಹಿರೇಮಣಿ ಬರೆಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಗಣಿತ : ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | * 100 ರಿಂದ 999ರ ವರೆಗಿನ ಐದು ಅಥವಾ ಆರು ಸಂಖ್ಯೆಗಳನ್ನು ಕ್ರಮಾನುಗತವಾಗಿ ಜೋಡಿಸಿ (ಏರಿಕೆ ಅಥವ ಇಳಿಕೆ ಕ್ರಮದಲ್ಲಿ) ಕೊಟ್ಟಾಗ ಬಿಟ್ಟು ಹೋಗಿರುವ ಸಂಖ್ಯೆಗಳನ್ನು ಪತ್ತೆಹಚ್ಚುವುದು. | * ಕ್ರಮಾನುಗತ ಸಂಖ್ಯೆಗಳ ಸಂಖ್ಯಾ ಮಿಂಚುಪಟ್ಟಿಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ತಿಳಿಸಿದ ಕೆಲವು ಲೆಕ್ಕಗಳನ್ನು ಮಾಡಿಸುವುದು. | ಗಣಿತ : ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು (ಮುಂದುವರಿದಿದೆ) | * ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾಗಣಗಳ ಬಗ್ಗೆ ಅರಿವು ಮೂಡಿಸುವುದು. | ಕನ್ನಡ, ದೇವನಾಗರಿ ಮತ್ತು ರೋಮನ್ ಸಂಖ್ಯಾ ಸೂಚಕಗಳ ಚಿತ್ರಪಟಗಳು | ಶಿಕ್ಷಕರು | ಶಿಕ್ಷಕರ ಸೂಚನೆಯಂತೆ ಮಕ್ಕಳು ಸಂಖ್ಯಾ ಆಟ ಆಡುವರು. |
| | 30 ನಿ | | | | ಹಿರೇಮಣಿ | ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಪಠ್ಯಪುಸ್ತಕದ ಪುಟಸಂಖ್ಯೆ 39ರ ಚಟುವಟಿಕೆಗಳನ್ನು ಮಿಂಚುಪಟ್ಟಿಯ ಸಹಾಯದಿಂದ ಆಡಿಸುವುದು. ನಂತರ ಕಪ್ಪು ಹಲಗೆಯ ಮೇಲೆ ಕ್ರಮಾಗತ ಸಂಖ್ಯೆಗಳನ್ನು ಬರೆದು, ಮಧ್ಯೆ ಕೆಲವು ಸಂಖ್ಯೆಗಳನ್ನು ಬರೆಯದೇ ಬಿಟ್ಟು ಆ ಸಂಖ್ಯೆಗಳನ್ನು ಮಕ್ಕಳು ಗುರ್ತಿಸಿ ಹೇಳುವಂತೆ ಹೇಳುವುದು. | | | | ಶಿಕ್ಷಕರು | ಕನ್ನಡ ಸಂಖ್ಯಾ ಸೂಚಕಗಳ, ದೇವನಾಗರಿ ಮತ್ತು ರೋಮನ್ ಸಂಖ್ಯಾ ಸೂಚಕಗಳ ಪ್ರದರ್ಶನ ಪಟಗಳನ್ನು ಪ್ರದರ್ಶಿಸಿ ಅವುಗಳನ್ನು ಪರಿಚಯಿಸುವುದು.<br>೧ ೨ ೩ ೪ ೫<br>೬ ೭ ೮ ೯ ೦<br>१ २ ३ ४ ५<br>६ ७ ८ ९ ०<br>I, II, III, IV,<br>V, VI, VII, VIII,<br>IX, X |
| | 10 ನಿ | | | | ಹಿರೇಮಣಿ | ಹೀಗೆ ಪುಟಸಂಖ್ಯೆ 42ರ ವರೆಗಿನ ಸಮಸ್ಯೆಗಳನ್ನು ಬಿಡಿಸುವುದು. | | | | ಶಿಕ್ಷಕರು | ಕಡ್ಡಿಪೊರಕೆ ಕಟ್ಟುವ ವಿಧಾನ ತಿಳಿಸುವರು. |
| | 30 ನಿ | | | | ಶಿಕ್ಷಕರರು | ಮಕ್ಕಳು ಬಿಡಿಸಿದ ಸಮಸ್ಯೆಗಳನ್ನು ಪರಿಶೀಲಿಸುವರು. ತಪ್ಪಿದ್ದರೆ ತಿದ್ದುವರು.<br>ಮೇಲಿನ ಚಟುವಟಿಕೆಗಳನ್ನು (ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಒತ್ತು ನೀಡಿ) ಮುಂದುರೆಸುವರು. | ಸಾ.ಉ.ಉ.ಕಾ. | * ಪೊರಕೆ ಕಟ್ಟುವ ಕೌಶಲ್ಯ ಬೆಳೆಸುವುದು. | * ತೆಂಗಿನ ಗರಿ, ದಾರ | ಹಿರೇಮಣಿ | ಮಕ್ಕಳಿಗೆ ತೆಂಗಿನಗರಿಯನ್ನು ಸಂಗ್ರಹಿಸಿ ಅವುಗಳ ಗರಿಗಳನ್ನು ಪ್ರತ್ಯೇಕಿಸಿ ಗರಿಕಡ್ಡಿಗಳನ್ನು ಸ್ವಚ್ಛಗೊಳಿಸಿ ಅವುಗಳಿಂದ ತೆಂಗಿನ ಗರಿ ಕಡ್ಡಿಯ ಪೊರಕೆ ಕಟ್ಟುವುದು. ಉತ್ತಮವಾಗಿ ಪೊರಕೆ ಕಟ್ಟಿದವರಿಗೆ ಪ್ರೋತ್ಸಾಹದ ಮಾತುಗಳನ್ನಾಡುವುದು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3ನೇ ಅವಧಿ** | 80 ನಿ | **ಪರಿಸರ ಅಧ್ಯಯನ :**<br>**ನಮ್ಮ ಸುತ್ತಲಿನ ಜೀವಿಗಳು** | * ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವರು.<br>* ಅವುಗಳ ನಡುವಿನ ಹೋಲಿಕೆಗಳನ್ನು ಮತ್ತು ವ್ಯತ್ಯಾಸಗಳನ್ನು ತಿಳಿಯುವರು. | | ಶಿಕ್ಷಕರು | **ಮೌಲ್ಯಮಾಪನ ಚಟುವಟಿಕೆ**<br>* ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ ಉತ್ತರಿಸಲು ಹೇಳಿ ನಂತರ ತಪ್ಪಾದ ಉತ್ತರವನ್ನು ಸರಿಪಡಿಸಿ ಹೇಳಿಸುವರು.<br>ಉದಾ : (1) 2 ಸಾಕು ಪ್ರಾಣಿಗಳ ಹೆಸರುಗಳನ್ನು ಹೇಳು.<br>(2) ಪ್ರಾಣಿಗಳ ಹೆಸರು ನೀಡಿ ಅವುಗಳು ಯಾವ ಅಂಗಗಳ ಸಹಾಯದಿಂದ ಚಲಿಸುತ್ತವೆ ಎಂಬುದನ್ನು ಕೇಳುವರು.<br>* ಬಿಟ್ಟ ಸ್ಥಳವನ್ನು ಸೂಕ್ತವಾದ ಪದಗಳಿಂದ ತುಂಬಿಸುವರು.<br>* ಕೊಟ್ಟಿರುವ ಹೇಳಿಕೆಗಳನ್ನು ಸರಿ ಅಥವಾ ತಪ್ಪು ಎಂಬುದನ್ನು ಬರೆಸುವರು.<br>* ನಂತರ ವಿವಿಧ ಸಸ್ಯ ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸಿ ಸಜೀವಿಗಳ ಆಲ್ಬಂ ತಯಾರಿಸಲು ಹೇಳುವರು. | | | | | 5ನೇ ತರಗತಿಯು<br>4ನೇ ತರಗತಿಯೊಂದಿಗೆ<br>ಹೊಂದಾಣಿಕೆಯಾಗಿರುತ್ತದೆ |
| **4ನೇ ಅವಧಿ** | 80 ನಿ | ಸಾ.ಉ.ಉ.ಕಾ<br>ಎಲೆಗಳ ಆಕೃತಿ ತಯಾರಿಕೆ. | * ಎಲೆಗಳನ್ನು ಬಳಸಿ, ಪ್ರಾಣಿ, ಪಕ್ಷಿ, ಮನೆ ವಿವಿಧ ಆಕೃತಿಗಳನ್ನು ತಯಾರಿಸುವುದು. | * ಎಲೆಗಳು<br>* ಹಾಳೆಗಳು<br>* ಕಡ್ಡಿಗಳು<br>* ಗೋಂದು | ಶಿಕ್ಷಕರು | * ಶಿಕ್ಷಕರು ಮೊದಲು ಮಕ್ಕಳಿಗೆ ಸೂಚನೆಗಳನ್ನು ನೀಡುತ್ತಾ ಮೊದಲು 20 ನಿಮಿಷಗಳಲ್ಲಿ ಮಾದರಿಯಾಗಿ ಮಾಡಿ ತೋರಿಸುವರು.<br>ಉದಾ : <br>ಈ ಚಿತ್ರವನ್ನು ಮಕ್ಕಳಿಗೆ ತೋರಿಸುತ್ತಾ ನಂತರ ಅವರಿಗೆ ಸುಲಭವಾಗಿ ಬರುವಂತಹ ಯಾವುದೇ ಚಿತ್ರಗಳನ್ನು ರಚಿಸಲು ಹೇಳಿ, ನಂತರ ಆ ಚಿತ್ರಗಳನ್ನು ಪ್ರದರ್ಶಿಸುತ್ತಾ ಮಕ್ಕಳನ್ನು ಪ್ರಶಂಸಿಸುತ್ತಾ ಪ್ರೇರೇಪಿಸುವರು. | | | | | 5ನೇ ತರಗತಿಯು<br>4ನೇ ತರಗತಿಯೊಂದಿಗೆ<br>ಹೊಂದಾಣಿಕೆಯಾಗಿರುತ್ತದೆ |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | | | | ಶಿಕ್ಷಕರು | ಹಿಂದಿನ ದಿನದ ಗದ್ಯದ ಕಥೆಯನ್ನು ಹೇಳುವರು ಕೆಲವು ಸರಳ ಕಥೆಗಳನ್ನು ಮಕ್ಕಳಿಂದ ಹೇಳಿಸುವರು. | | | | ಶಿಕ್ಷಕರು | 3ನೇ ತರಗತಿಗೆ ಹೇಳಿದ ಕಥೆಯನ್ನು ಆಲಿಸುವರು. |
| | 30 ನಿ | ಕನ್ನಡ : ಬುದ್ಧಿವಂತ ಮಂತ್ರಿ (ಮುಂದುವರಿಕೆ) | * ಸರಿಯಾದ ರೂಪ ಅನುಕ್ರಮದೊಂದಿಗೆ ......................<br>* ಪದಗಳ ನಡುವೆ ಅಂತರ ...................... | ಹೊಸ ಪದಗಳ ಅರ್ಥಬರೆದ ಮಿಂಚುಪಟ್ಟಿ | ಹಿರೇಮಣಿ | "ಅಪ್ಪಾಜಿ ಸಮಸ್ಯೆಗೆ ........................................ ........................................ ........................................ ಹೊಗಳಿ ಸನ್ಮಾನಿಸಿದ".<br>ಈ ಗದ್ಯ ಭಾಗವನ್ನು ಮಕ್ಕಳು ಹಿರೇಮಣಿ ಸಹಕಾರ ದೊಂದಿಗೆ ತಪ್ಪಿಲ್ಲದೆ ಓದಿಸುವರು. ಹಿರೇಮಣಿ ಕಾಗುಣಿತ ತಪ್ಪುಗಳನ್ನು ತಿದ್ದುವನು. ಹಾಗೆಯೇ ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಪ್ರತಿ ಮಗುವಿನಿಂದಲೂ ಬರೆಸುವನು. | ಕನ್ನಡ : ಸಂಗೊಳ್ಳಿ ರಾಯಣ್ಣ (ಮುಂದುವರಿದ) | * ವಿವರಣಾತ್ಮಕವಾಗಿ ಹಾಗೂ ಸರಳವಾಗಿ ಮಾತನಾಡುವರು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವರು. | * ಹೊಸ ಪದಗಳ ಮಿಂಚು ಪಟ್ಟಿ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಓದಲಾದ ಗದ್ಯಭಾಗವನ್ನು "ಹರಹರ ಮಹಾದೇವ ........................................ ಸೈನ್ಯವನ್ನು ಸದೆಬಡಿದರು" ವಿವರಣಾತ್ಮಕವಾಗಿ ಹೇಳುತ್ತಾ ಮಕ್ಕಳು ಹೇಳಿದ ಹೊಸ ಪದಗಳಿಗೆ ಅರ್ಥ ತಿಳಿಸುವರು. ಅರ್ಥಗಳನ್ನು ಕ.ಹ. ಮೇಲೆ ಬರೆದು ಮಕ್ಕಳಿಗೆ ಬರೆದುಕೊಳ್ಳಲು ಹೇಳುವರು. |
| | 40 ನಿ | | | | ಶಿಕ್ಷಕರು | * ಮೇಲಿನ ಗದ್ಯಭಾಗವನ್ನು ಓದಿಸುವರು.<br>* ಹೊಸ ಪದಗಳನ್ನು ಪ್ರತಿ ಮಗುವಿನಿಂದ ಓದಿಸುವರು. | ಜೀವನ ಕೌಶಲ : ಏಕಾಗ್ರತೆ | * ಏಕಾಗ್ರತೆ ಬೆಳೆಸಿಕೊಳ್ಳುವರು | ಅನ್ಯ ವಸ್ತುಗಳು | ಹಿರೇಮಣಿ | ಕೆಲವು ವಸ್ತುಗಳನ್ನು ತರಗತಿ ಕೋಣೆಯ ಮೇಜಿನ ಮೇಲೆ ಹಾಕಿ ಪ್ರತಿ ಮಗುವೂ ಆ ಎಲ್ಲ ವಸ್ತುಗಳನ್ನು ವೀಕ್ಷಿಸಿ ನಂತರ ಶಾಲಾ ಆವರಣದಲ್ಲಿ ಕುಳಿತು ಕೊಠಡಿಯ ಮೇಜಿನ ಮೇಲೆ ನೋಡಿದ ವಸ್ತುಗಳ ಹೆಸರನ್ನು ಬರೆಯುವರು.<br>ಈ ರೀತಿ ಏಕಾಗ್ರತೆ ಆಟವನ್ನು ಆಡಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 10 ನಿ | ಪರಿಸರ ಅಧ್ಯಯನ : ಪ್ರಾಣಿ ಪ್ರಪಂಚ | * ಪ್ರಾಣಿಗಳ ವಾಸಸ್ಥಳ ದೇಹದ ಗಾತ್ರ ಮತ್ತು ಆಕಾರಗಳನ್ನು ಗುರ್ತಿಸುವರು.<br>* ಪ್ರಾಣಿಗಳ ಆಹಾರಭ್ಯಾಸವನ್ನು ತಿಳಿಯುವರು ಹಾಗೂ ಅದರ ಆಧಾರದ ಮೇಲೆ ವಿಂಗಡಿಸುವರು.<br>* ಮಾನವನಿಗೂ ಮತ್ತು ಇತರ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು. | * ಡಬ್ಬ<br>* ಪ್ರಾಣಿ ಮತ್ತು ಪಕ್ಷಿಗಳ ಹೆಸರಿರುವ ಚೀಟಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಮಧ್ಯದಲ್ಲಿ ಒಂದು ಡಬ್ಬದಲ್ಲಿ ಕೆಲವು ಪ್ರಾಣಿ ಪಕ್ಷಿಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಡಬ್ಬದಲ್ಲಿ ಹಾಕುವುದು. ಪ್ರತಿ ಮಗುವು ಡಬ್ಬದಲ್ಲಿರುವ ಒಂದು ಚೀಟಿಯನ್ನು ತೆಗೆದುಕೊಂಡು ಆ ಚೀಟಿಯಲ್ಲಿರುವ ಪ್ರಾಣಿ ಅಥವಾ ಪಕ್ಷಿ ಕೂಗುಗಳನ್ನು ಅನುಕರಣೆ ಮಾಡುವಂತೆ ಮಾರ್ಗದರ್ಶನ ನೀಡಿ ಮಾಡಿಸುವರು. | ಗಣಿತ<br>ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾ ಗಣಗಳು | * ಕನ್ನಡ ಸಂಖ್ಯಾ ಸೂಚಕಗಳನ್ನು ಅರಿಯುವರು. | ಕನ್ನಡ ಸಂಖ್ಯೆ ಸೂಚಕಗಳ ಮಿಂಚು ಪಟ್ಟಿಗಳು | ಹಿರೇಮಣಿ<br><br>ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>ಹಿಂದಿನ ಅವಧಿಯಲ್ಲಿ ಬಳಸಲಾದ ಸಂಖ್ಯಾ ಸೂಚಕದಲ್ಲಿರುವಂತೆ ಮಿಂಚು ಪಟ್ಟಿಗಳನ್ನು ವಿಂಗಡಿಸುವುದು :<br>ಸೂಚನೆ : ಎಲ್ಲಾ ಮಿಂಚು ಪಟ್ಟಿಗಳನ್ನು ಒಟ್ಟಿಗೆ ಹಾಕುವರು.<br><br>**ಕಲಿಕಾಂಶ ಚಟುವಟಿಕೆ**<br>ಶಾಲೆಯ ಹೊರಾಂಗಣದಲ್ಲಿ ಸಂಖ್ಯಾಸೂಚಕವನ್ನು ಬರೆದು ಅದರ ಮೇಲೆ ಮಕ್ಕಳು ನಿಲ್ಲುವಂತೆ ಹೇಳುವರು.<br><br>ನಂತರ ಕೊಠಡಿಯೊಳಗೆ ಒಂದು ಕನ್ನಡ ಸಂಖ್ಯಾ ಸೂಚಕಗಳನ್ನು ನೆಲದ ಮೇಲೆ ಬರೆದು ಅದರ ಮೇಲೆ ಹುಣಸೇಬೀಜಗಳನ್ನು ಜೋಡಿಸುವಂತೆ ಹೇಳುವರು. ಇದೇ ರೀತಿ ಕಲಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಬರೆದ ಪ್ರಾಣಿಗಳ ಮತ್ತು ಪಕ್ಷಿಗಳ ಹೆಸರುಗಳನ್ನು ಎಲ್ಲ ಮಕ್ಕಳಿಗೂ ಪಟ್ಟಿ ಮಾಡಲು ತಿಳಿಸುವುದು. | | | | | |
| | 10 ನಿ | | | | ಶಿಕ್ಷಕರು | ಮೇಲಿನ ಪಟ್ಟಿಮಾಡಲಾದ ಪ್ರಾಣಿ ಮತ್ತು ಪಕ್ಷಿಗಳ ಹೆಸರುಗಳನ್ನು ಪ್ರತಿ ಮಗುವೂ ಒಂದೊಂದು ಹೆಸರನ್ನು ಹೇಳುವುದು. ಹೇಳಿದ ಹೆಸರನ್ನು ಶಿಕ್ಷಕರು ಕ.ಹ. ಮೇಲೆ ಬರೆಯುವರು. ಈ ಪಟ್ಟಿಯಲ್ಲಿಲ್ಲದ ಬೇರೆ ಪ್ರಾಣಿ ಮತ್ತು ಪಕ್ಷಿಗಳ ಹೆಸರುಗಳನ್ನು ಹೇಳಿಸಿ ಕ.ಹ. ಮೇಲೆ ಬರೆಯುವರು. ಬರೆದ ಪಟ್ಟಿಯನ್ನು ಮಕ್ಕಳಿಗೆ ಬರೆದುಕೊಳ್ಳಲು ಹೇಳುವರು. | ಯೋಜನೆ | * ಕವಿ ಕಾವ್ಯ ವಿಚಾರ ಸಂಗ್ರಹಣೆ<br>* ಸಂಗ್ರಹಣಾ ಮನೋಭಾವ ಬೆಳೆಸುವುದು. | ಗ್ರಂಥಾಲಯದ ಪುಸ್ತಕಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ಸಂಗ್ರಹಿಸಿದ ಕವಿಗಳ ವಿಚಾರವನ್ನು ಶಿಕ್ಷಕರ ಸಹಕಾರದೊಂದಿಗೆ ವ್ಯವಸ್ಥಿತವಾಗಿ ಅಂದವಾಗಿ ತಪ್ಪಿಲ್ಲದೆ ಬರೆಯುವರು ಮತ್ತು ಬರೆದ ಟಿಪ್ಪಣಿಗೆ ಅಂಚುಗಳಲ್ಲಿ ಗೆರೆ ಎಳೆಯುವುದರ ಮೂಲಕ ಅವುಗಳನ್ನು ಸಿದ್ಧಪಡಿಸುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಬರೆದುಕೊಳ್ಳುವರು | | | | ಶಿಕ್ಷಕರು | ಬರೆದ ಟಿಪ್ಪಣಿಯನ್ನು ಶಿಕ್ಷಕರು ಪರಿಶೀಲಿಸುವರು ಮತ್ತು ಮಾರ್ಗದರ್ಶನ ನೀಡುವರು. |

| ಅವಧಿ | ಸಮಯ ನಿಮಿಷ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾ ಸಾಮರ್ಥ್ಯ | ಚಟುವಟಿಕೆ | ಕಲಿಕೋಪಕರಣಗಳು | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ | ಕಲಿಕಾ ಸಾಮರ್ಥ್ಯ | ಚಟುವಟಿಕೆ | ಕಲಿಕೋಪಕರಣಗಳು | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಸಾ.ಬು.ಬು.ಕಾ | * "ಬಿಂದಿ"ಗಳನ್ನು ಉಪಯೋಗಿಸಿ ಅಕ್ಷರ ಪದಗಳ ರಚನೆ ಮಾಡುವುದು. | ಡ್ರಾಯಿಂಗ್ ಶೀಟ್, ಬಿಂದಿಗಳು, ಕತ್ತರಿ, ಸ್ಕೆಚ್‌ಪೆನ್ | ಶಿಕ್ಷಕರು | ಮಕ್ಕಳಿಂದ ಡ್ರಾಯಿಂಗ್ ಶೀಟಿನ ಮೇಲೆ ಅಕ್ಷರ ಹಾಗೂ ಪದಗಳನ್ನು ಬರೆಯಿಸಿ ಅದರ ಮೇಲೆ ವಿವಿಧ ಬಣ್ಣ ಹಾಗೂ ಆಕಾರದ ಬಿಂದಿಗಳನ್ನು ಅಂಟಿಸಿ ಮಿಂಚುಪಟ್ಟಿಗಳನ್ನು ತಯಾರು ಮಾಡಿಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 40 ನಿ | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮವನ್ನು ಕೇಳಿಸುವುದು. | | | | | | | | | |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಚಟುವಟಿಕೆ | ಸಾಮರ್ಥ್ಯ ಉದ್ದೇಶ | ಬಳಸುವ ಕಲಿಕೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಚಟುವಟಿಕೆ | ಸಾಮರ್ಥ್ಯ ಉದ್ದೇಶ | ಬಳಸುವ ಕಲಿಕೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಸಾ.ಓ.ಬ.ಕಾ | ಬಂದಿಗಳಿಂದ ಅಕ್ಷರ ಹಾಗೂ ಪದಗಳ ಮಿಂಚುಪಟ್ಟಿಗಳನ್ನು ತಯಾರಿಸುವರು. (ಮುಂದುವರಿಕೆ) | ಚಿ.ಚ ಕಾರ್ಡ್‌ಬೋರ್ಡ್, ಶೀಟ್, ಕತ್ತರಿ, ಸ್ಕೆಚ್‌ಪೆನ್, ಬಂದಿಗಳು | ಶಿಕ್ಷಕರು | ಮಕ್ಕಳಿಂದ ಹಿಂದಿನ ಅವಧಿಯಲ್ಲಿ ಪ್ರಾರಂಭಿಸಿದ **"ಬಂದಿ"**ಯಲ್ಲಿ ಅಕ್ಷರ ಹಾಗೂ ಪದಗಳ ಮಿಂಚುಪಟ್ಟಿ ತಯಾರಿಕೆಯನ್ನು ಮುಂದುವರೆಸಿ ಸಾಕಷ್ಟು ಮಿಂಚು ಪಟ್ಟಿಗಳನ್ನು ತಯಾರು ಮಾಡಿಸುವರು.<br>ಮಾರ್ಗದರ್ಶನ ನೀಡುತ್ತಾ ಎಲ್ಲಾ ಮಕ್ಕಳೂ ಭಾಗವಹಿಸುವಂತೆ ಮಾಡುವರು. | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | |
| | 40 ನಿ | ಪುಸ್ತಕ ಓದು | * ಸರಳ ಕಥೆಗಳಲ್ಲಿನ ನೀತಿಯನ್ನು ಅರಿಯುವರು. | ಗ್ರಂಥಾಲಯದ ನೀತಿ ಕಥೆಗಳ ಪುಸ್ತಕಗಳು | ಶಿಕ್ಷಕರು | ಗ್ರಂಥಾಲಯದಲ್ಲಿನ ಪಂಚತಂತ್ರದ ನೀತಿ ಕಥೆಗಳ ಪುಸ್ತಕ ಮಕ್ಕಳಿಗೆ ನೀಡಿ ಒಬ್ಬರಿಂದ ಅದನ್ನು ಗಟ್ಟಿಯಾಗಿ ಸ್ಪಷ್ಟವಾಗಿ ಓದಿಸುವರು. ಉಳಿದ ಮಕ್ಕಳು ಅದನ್ನು ಆಲಿಸುವರು. ಶಿಕ್ಷಕರು ಆ ಕಥೆಯಲ್ಲಿನ ನೀತಿಯನ್ನು ಹೇಳಿ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ತಿಳಿಸುವರು. | | | | | |
| 40 ನಿಮಿಷ | ದಿನ - 18 1ನೇ ಅವಧಿ | | | | | ----------- 1ನೇ ತರಗತಿಯಿಂದ 5ನೇ ತರಗತಿಯವರೆಗೆ ಸಾಮೂಹಿಕ ಕವಾಯಿತು ----------- | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಕನ್ನಡ : ಬುದ್ಧಿವಂತ ಮಂತ್ರಿ (ಮುಂದುವರಿಕೆ) | * ಸರಿಯಾದ ರೂಪ ಅನುಕ್ರಮದೊಂದಿಗೆ ............<br>* ಪದಗಳ ನಡುವೆ ಅಂತರ ............ | | ಶಿಕ್ಷಕರು | ಕೃಷ್ಣದೇವರಾಯ ಮತ್ತು ತಿಮ್ಮರಸರ ಪೂರ್ಣ ಕಥೆಯನ್ನು ಹಾವ ಭಾವದೊಂದಿಗೆ ಹೇಳುವರು. | ಕನ್ನಡ ಸಂಗೊಳ್ಳಿ ರಾಯಣ್ಣ (ಮುಂದುವರಿದ ಭಾಗ) | * ಏರಿಳಿತವಾಗಿ ಹಾಗೂ ಸರಾಗವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | * ಸಂಗೊಳ್ಳಿರಾಯಣ್ಣನ ಚಿತ್ರಪಟ<br>* ಯುದ್ಧದ ಸನ್ನಿವೇಶದ ಚಿತ್ರಪಟ | ಶಿಕ್ಷಕರು | 3ನೇ ತರಗತಿಗೆ ಹೇಳಿದ ಕಥೆಯನ್ನು ಕೇಳುವರು. |
| | 30 ನಿ | | | | ಹಿರೇಮಣಿ | **ಪುನರ್ಬಲನ ಚಟುವಟಿಕೆ**<br>ಹಿಂದಿನ ಗದ್ಯಭಾಗದ ಅಭ್ಯಾಸದ ಹಾಳೆಯಲ್ಲಿರುವ ಓದಿ ತಿಳಿ, ಗಮನಿಸಿ ತಿಳಿ. ಒಂದೇ ವಾಕ್ಯದಲ್ಲಿ ಉತ್ತರಿಸಿ, ಹೊಂದಿಸಿ ಬರೆಯಿರಿ. ಈ ಚಟುವಟಿಕೆಗಳನ್ನು ಹಿರೇಮಣಿ ಸಹಕಾರದೊಂದಿಗೆ ಎಲ್ಲ ಮಕ್ಕಳು ಓದುವರು. ನಂತರ ಎಲ್ಲ ಪ್ರಶ್ನೆಗಳಿಗೆ ಉತ್ತರ ಬರೆಸುವನು. ಎಲ್ಲ ಮಕ್ಕಳೂ ಬರೆದುಕೊಳ್ಳುವರು. ತಪ್ಪುಗಳನ್ನು ತಿದ್ದುವನು. | | | | ಶಿಕ್ಷಕರು | **ಕಲಿಕಾಂಶ ಚಟುವಟಿಕೆ**<br>"ಸಂಪಗಾವಿ ಮಾಮಲೇದಾರ ............ ............ ರಾಯಣ್ಣನ ಗುಂಪು ಸೇರಿದರು". ಈ ಗದ್ಯಭಾಗವನ್ನು ಶಿಕ್ಷಕರು ಸ್ವರಭಾರ ಏರಿಳಿತದೊಂದಿಗೆ ಓದುವರು. ನಂತರ ಮಕ್ಕಳಿಗೆ ಮೌನ ಓದನ್ನು ನೀಡುವರು. |
| | 10 ನಿ | | | | ಹಿರೇಮಣಿ | ಓದಿ ತಿಳಿ, ಗಮನಿಸಿ ತಿಳಿ ಚಟುವಟಿಕೆ ಮಾಡುವರು. | ಗಣಿತ ರೋಮನ್ ಸಂಖ್ಯೆಗಳು ಮತ್ತು ಸಂಖ್ಯಾಗಣಗಳು | * ರೋಮನ್ ಸಂಖ್ಯಾ ಸೂಚಕಗಳನ್ನು ಅರಿಯುವರು. | ಕಲ್ಲುಗಳು, ಕಡ್ಡಿಗಳು | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಕೆಲವು ಕನ್ನಡ ಸಂಖ್ಯಾ ಸೂಚಕಗಳನ್ನು ಕ.ಹ. ಮೇಲೆ ಬರೆಸುವರು. |
| | 30 ನಿ | | | | ಶಿಕ್ಷಕರು | ಹಿಂದೆ ಹೇಳಲಾದ ಪ್ರಶ್ನೋತ್ತರಗಳನ್ನು ತಪ್ಪಿಲ್ಲದೆ ಅಂದವಾಗಿ ಬರೆಯುವರು ಮತ್ತು ಓದಿಸುವರು. | | | | ಹಿರೇಮಣಿ | ಕೆ.ಜಿ. ಹಾಳೆಯ ಮೇಲೆ ಶಿಕ್ಷಕರು ಬರೆದ ರೋಮನ್ ಅಂಕೆಗಳ ಸಂಖ್ಯಾ ಸೂಚಕಗಳ ಮೇಲೆ ಬೆಂಕಿ ಕಡ್ಡಿಗಳನ್ನು ಅಂಟಿಸುವರು.<br>ನಂತರ ಹೊರಾಂಗಣದಲ್ಲಿ ನೆಲದ ಮೇಲೆ ಬರೆದ ರೋಮನ್ ಸಂಖ್ಯಾ ಸೂಚಕಗಳ ಮೇಲೆ ಕಲ್ಲುಗಳನ್ನು ಜೋಡಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ<br>ಸಾಮರ್ಥ್ಯ ಸಂಕೇತ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ<br>ಸಾಮರ್ಥ್ಯ ಸಂಕೇತ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ<br>60 ನಿ | ಸಾ.ಉ.ಉ.ಕಾ. | ಸೃಜನಶೀಲತೆ ಬೆಳೆಸುವುದು. | * ಕಡ್ಡಿಗಳು<br>* ವಾಲ್ ಟ್ಯೂಬ್<br>* ಕತ್ತರಿ | ಶಿಕ್ಷಕರು | * ಶಿಕ್ಷಕರು ಮೊದಲು ಮಕ್ಕಳಿಗೆ ಸೂಚನೆಗಳನ್ನು ನೀಡಿ ಆಮೇಲೆ ಒಂದು ಆಕೃತಿಯನ್ನು ಮಾದರಿಯಾಗಿ ಮಾಡಿ ತೋರಿಸುವರು.<br>ಉದಾ :<br><br><br>ಇದೇ ರೀತಿಯಲ್ಲಿ ವಿವಿಧ ಬಗೆಯ ಕೋನಗಳು, ವರ್ಗ, ಆಯುತ, ಚತುರ್ಭುಜ. ಹೀಗೆ ಅವರಿಗೆ ಸುಲಭವಾಗುವಂತಹ ಹಲವಾರು ಆಕೃತಿಗಳನ್ನು ರಚನೆ ಮಾಡಲು ತಿಳಿಸುವರು. ಆನಂತರ ಅವರು ರಚಿಸಿದಂತಹ ಆಕೃತಿಗಳನ್ನು ಪ್ರದರ್ಶಿಸುತ್ತಾ ಪ್ರಶಂಸಿಸುವುದು.<br> | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ : ಬುದ್ಧಿವಂತ ಮಂತ್ರಿ (ಮುಂದುವರಿಕೆ) | * ಸರಿಯಾದ ರೂಪ ಅನುಕ್ರಮದೊಂದಿಗೆ ............ <br> * ಪದಗಳ ನಡುವೆ ಇರುವ ............ | ಗಾದೆಗಳನ್ನು ಬರೆದ ಮಿಂಚುಪಟ್ಟಿಗಳು <br> ಚಿತ್ರಗಳು, ಬಣ್ಣದ ಪೆನ್ಸಿಲ್ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಕನ್ನಡ ನಾಡು ನುಡಿ ಹಿರಿಮೆಯನ್ನು ಸಾರುವ ಒಂದು ನಾಡಗೀತೆಯನ್ನು ಅಭಿನಯದೊಂದಿಗೆ ಹೇಳಿಕೊಡುವರು. | ಕನ್ನಡ <br> ಸಂಗೊಳ್ಳಿ ರಾಯಣ್ಣ (ಮುಂದುವರೆದ ಭಾಗ) | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು. <br> * ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | | ಶಿಕ್ಷಕರು | ಮೂರನೇ ತರಗತಿಗೆ ಹೇಳಿಕೊಡುವ ನಾಡಗೀತೆಯನ್ನು ಅಭಿನಯದೊಂದಿಗೆ ಹೇಳುವರು. |
| | 30 ನಿ | | | | ಹಿರೇಮಣಿ | ಅಭ್ಯಾಸ ಹಾಳೆಯಲ್ಲಿ ಮುಂದುವರೆದ ಭಾಗವನ್ನು ಮಕ್ಕಳು ಹಿರೇಮಣಿ ಸಹಕಾರದೊಂದಿಗೆ ಸ್ವಂತ ವಾಕ್ಯದಲ್ಲಿ ಬರೆಯುವುದು. ಗುಂಪಿಗೆ ಸೇರದ ಪದ ಆರಿಸಿ ಬರೆಯುವುದು. ಪ್ರಶ್ನೋತ್ತರ, ಹೂವುಗಳ ಹೆಸರುಗಳನ್ನು ಪಟ್ಟಿ ಮಾಡಿಸುವರು ಮತ್ತು ಗುಲಾಬಿ ಚಿತ್ರಕ್ಕೆ ಬಣ್ಣ ತುಂಬುವ ಕೆಲಸ ಈ ಚಟುವಟಿಕೆಯನ್ನು ಪೂರ್ಣಗೊಳಿಸುವರು. | | | * ಸಂಗೊಳ್ಳಿರಾಯಣ್ಣನ ಚಿತ್ರ <br> * ಯುದ್ಧದ ಸನ್ನಿವೇಶದ ಚಿತ್ರಪಟ ಚಿತ್ರ <br> * ಹೊಸ ಪದಗಳ ಪಟ್ಟಿ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಓದಲಾದ ಗದ್ಯಭಾಗವನ್ನು ಮಕ್ಕಳಿಂದ ಗಟ್ಟಿಯಾಗಿ ಓದಿಸುವರು. ಓದುವಾಗ ಬರುವ ತಪ್ಪುಗಳನ್ನು ತಿದ್ದುವರು. <br> ನಂತರ ಈ ಗದ್ಯಭಾಗ ವಿವರಣಾತ್ಮಕವಾಗಿ ಹೇಳುತ್ತಾ ಹೊಸ ಪದಗಳನ್ನು ಗುರ್ತಿಸಿ ಅವುಗಳ ಅರ್ಥವನ್ನು ಕ.ಹ. ಮೇಲೆ ಬರೆಯುವರು. <br> **ಸೂಚನೆ** : ಹೊಸ ಪದಗಳಿಗೆ ಅರ್ಥ ಪಟ್ಟಿ ಮಾಡುವರು. |
| | 20 ನಿ | | | | ಶಿಕ್ಷಕರು | ಅಭ್ಯಾಸದ ಹಾಳೆಯಲ್ಲಿ ಬರೆಯಲಾದ ಎಲ್ಲ ಮಾಹಿತಿಗಳನ್ನು ಪರಿಶೀಲಿಸುವರು. ಮತ್ತು ತಪ್ಪುಗಳನ್ನು ತಿದ್ದುವರು. | | | | ಹಿರೇಮಣಿ | ಕಪ್ಪು ಹಲಗೆಯ ಮೇಲೆ ಬರೆದ ಹೊಸ ಪದಗಳ ಅರ್ಥವನ್ನು ಮಕ್ಕಳಿಗೆ ಬರೆದುಕೊಳ್ಳಲು ಹೇಳುವರು. ಮಕ್ಕಳು ತಪ್ಪಿಲ್ಲದೆ ಬರೆದುಕೊಳ್ಳುವರು. ಹಾಗೂ ಗದ್ಯಭಾಗವನ್ನು ಅಂದವಾಗಿ ತಪ್ಪಿಲ್ಲದೆ ಬರೆಯಲು ಹೇಳುವರು. |
| | 20 ನಿ | | | | ಹಿರೇಮಣಿ | ಪಠ್ಯಪುಸ್ತಕದ ಭಾಷಾಭ್ಯಾಸದಲ್ಲಿರುವ ಪದಗಳಿಗೆ ಸರಿಹೊಂದುವ ಬೇರೆ ಪದಗಳನ್ನು ಹೇಳಿ ಅವುಗಳ ಅರ್ಥ ಮತ್ತು ವ್ಯತ್ಯಾಸವನ್ನು ಉದಾಹರಣೆ ಸಹಿತ ತಿಳಿಸುವರು. <br> ಕೆಲವು ಗಾದೆ ಮತ್ತು ನುಡಿಗಟ್ಟುಗಳನ್ನು ಹೇಳುವರು. | | | | ಶಿಕ್ಷಕರು | ಉಳಿದ ಗದ್ಯಭಾಗವಾದ "ಒಂದು ದಿನ ರಾಯಣ್ಣ .................. .................. ರಾಯಣ್ಣ ಅಮರನಾದ". ಇದನ್ನು ಸ್ವರ ಭಾರ ಏರಿಳಿತದೊಂದಿಗೆ ಓದುವರು. ನಂತರ ಇಡೀ ಪಾಠದ ಸಾರಾಂಶ ಹೇಳುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 10 ನಿ | **ಜೀವನ ವಿಜ್ಞಾನ : ಸರಳ ವ್ಯಾಯಾಮಗಳು** | * ಸರಳ ವ್ಯಾಯಾಮಗಳ ಬಗ್ಗೆ ಅರಿಯುವರು.<br>* ವ್ಯಾಯಾಮದ ಪ್ರಾಮುಖ್ಯತೆ ಅರಿಯುವರು. | | ಹಿರೇಮಣಿ | ಐದನೇ ತರಗತಿಯ ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸುವರು. | **ಗಣಿತ, ಸಂಖ್ಯೆಗಳು ಮತ್ತು ಸಂಖ್ಯಾ ವಿವಿಧ ಗಣಗಳು** | * ಕನ್ನಡ ಮತ್ತು ರೋಮನ್ ಸಂಖ್ಯಾ ಸೂಚಕಗಳ ವ್ಯತ್ಯಾಸ ಅರಿಯುವರು. | ಕನ್ನಡ ಮತ್ತು ರೋಮನ್ ಅಂಕಿಗಳ ಮಿಂಚುಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>ಕೆಲವು ಕನ್ನಡ ರೋಮನ್ ಅಂಕೆಗಳ ಮಿಂಚುಪಟ್ಟಿಗಳನ್ನು ಹಾಕಿ ಮೀನು ಗಾಳದ ಆಟ ಆಡಿಸುವರು. |
| | 30 ನಿ | | | | ಹಿರೇಮಣಿ | ಸಾಮೂಹಿಕ ಕವಾಯಿತು ಸಮಯದಲ್ಲಿ ಹೇಳಲಾದ ಸರಳ ವ್ಯಾಯಾಮಗಳನ್ನು ಹಿರೇಮಣಿ ಸಹಾಯದಿಂದ ಎಲ್ಲ ಮಕ್ಕಳು ಹೊರಾಂಗಣದಲ್ಲಿ ಮಾಡಲು ಸೂಚಿಸುವರು. | | | | ಶಿಕ್ಷಕರು | ಮಕ್ಕಳಿಗೆ ಕನ್ನಡ, ರೋಮನ್ ಮತ್ತು ಹಿಂದೂ ಅರೇಬಿಕ್ ಸಂಖ್ಯಾ ಸೂಚಕಗಳ ಹೋಲಿಕೆ ಮಾಡುವಂತೆ ತಿಳಿಸುವರು.<br>ನಂತರ ಕೆಲವು ಸಂಖ್ಯೆಗಳನ್ನು ಹಿರೇಮಣಿ ಹೇಳಿ ಮಕ್ಕಳು ಕ.ಹ. ಮೇಲೆ ಬರೆಯುವಂತೆ ತಿಳಿಸುವರು. ತಪ್ಪುಗಳನ್ನು ತಿದ್ದುತ್ತಾ ಅಭ್ಯಾಸ ಮಾಡಿಸುವರು. |
| | 40 ನಿ | | | | ಶಿಕ್ಷಕರು | ಶಿಕ್ಷಕರು ಆಟದ ಬಯಲಿನಲ್ಲಿ ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಕೆಲವು ಸರಳ ವ್ಯಾಯಾಮಗಳನ್ನು ವ್ಯವಸ್ಥಿತವಾಗಿ ಮಾಡಿಸುವರು. ಈ ಸಮಯದಲ್ಲಿ ಬಳಸಬಹುದಾದ ಸೂಚನೆಗಳನ್ನು ಮತ್ತು ಸರಳ ವ್ಯಾಯಾಮದ ಪ್ರಾಮುಖ್ಯತೆಯನ್ನು ತಿಳಿಸುವರು. ಮಕ್ಕಳು ಶಿಕ್ಷಕರ ಹೇಳಿಕೆಗಳನ್ನು ಆಲಿಸುವರು ಮತ್ತು ಸರಳ ವ್ಯಾಯಾಮಗಳನ್ನು ಮಾಡುವರು. | **ಕೇಳಿ–ಕಲಿ** | ಕೇಳಿ-ಕಲಿ ಪಾಠವನ್ನು ಕೇಳಿಸುವರು | | | |

<table>
<tr><td rowspan="2">ಅವಧಿ</td><td rowspan="2">ಸಮಯ ಹಂಚಿಕೆ</td><td colspan="5">ಮೂರನೇ ತರಗತಿ</td><td colspan="5">ಐದನೇ ತರಗತಿ</td></tr>
<tr><td>ವಿಷಯ ಮತ್ತು ಪಾಠದ ಹೆಸರು</td><td>ಸಾಮರ್ಥ್ಯದ ವಿವರ</td><td>ಬಳಸ ಬಹುದಾದ ಕಲಿಕಾ ಸಾಮಗ್ರಿ</td><td>ನಿರ್ವಹಣೆ</td><td>ಕಲಿಕಾ ಪ್ರಕ್ರಿಯೆ</td><td>ವಿಷಯ ಮತ್ತು ಪಾಠದ ಹೆಸರು</td><td>ಸಾಮರ್ಥ್ಯದ ವಿವರ</td><td>ಬಳಸ ಬಹುದಾದ ಕಲಿಕಾ ಸಾಮಗ್ರಿ</td><td>ನಿರ್ವಹಣೆ</td><td>ಕಲಿಕಾ ಪ್ರಕ್ರಿಯೆ</td></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td><td>10</td><td>11</td><td>12</td></tr>
<tr><td>3ನೇ ಅವಧಿ</td><td>20 ನಿ<br><br>60 ನಿ</td><td>ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು (ಕನಿಷ್ಠ-ಗರಿಷ್ಠ)</td><td>* 1 ರಿಂದ 999ರ ವರೆಗಿನ ಸಂಖ್ಯಾ ಸೂಚಕಗಳಲ್ಲಿ ಯಾವುದಾದರೂ 5 ಅಥವಾ 6 ಸಂಖ್ಯೆಗಳನ್ನು ಕೊಟ್ಟಾಗ ಅವುಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳನ್ನು ಪತ್ತೆ ಹಚ್ಚುವುದು.</td><td>* ಸಂಖ್ಯೆಗಳ ಮಿಂಚುಪಟ್ಟಿ<br>* ಸ್ಥಾನ ಬೆಲೆ ನಕ್ಷೆ</td><td>ಶಿಕ್ಷಕರು</td><td>ಮೊದಲು ಮಕ್ಕಳಿಗೆ ಸ್ಥಾನಬೆಲೆ ಕೋಷ್ಟಕದ ಬಗ್ಗೆ ಪರಿಚಯ ಮಾಡಿಸುವರು. ನಂತರ ಅವರಿಗೆ ಸೂಚನೆ ನೀಡುವರು.<br>* ನಾಲ್ಕು ಮಕ್ಕಳಿಗೆ 4 ಮಿಂಚುಪಟ್ಟಿಗಳನ್ನು ನೀಡಿ ಅದರಲ್ಲಿರುವ ಸಂಖ್ಯೆಗಳನ್ನು ಓದಲು ತಿಳಿಸುವರು. ಆನಂತರ ಯಾರ ಕಾರ್ಡ್‌ನಲ್ಲಿರುವ ಸಂಖ್ಯೆ ಅತ್ಯಂತ ದೊಡ್ಡದು ಹಾಗೂ ಯಾರ ಕಾರ್ಡ್‌ನಲ್ಲಿರುವ ಸಂಖ್ಯೆ ಅತ್ಯಂತ ಚಿಕ್ಕದು ಎಂದು ಕೇಳುತ್ತಾ, ಈ ನಾಲ್ಕು ಮಕ್ಕಳ ಕಾರ್ಡ್‌ನಲ್ಲಿರುವ ಸಂಖ್ಯೆಗಳನ್ನು ಸ್ಥಾನಬೆಲೆ ಪಟ್ಟಿಯಲ್ಲಿ ಬರೆಯುವರು.<br>
<table>
<tr><td></td><td>ನೂರು</td><td>ಹತ್ತು</td><td>ಬಿಡಿ</td></tr>
<tr><td>1 ಕಾರ್ಡ್</td><td>4</td><td>8</td><td>3</td></tr>
<tr><td>2 ಕಾರ್ಡ್</td><td>9</td><td>0</td><td>6</td></tr>
<tr><td>3 ಕಾರ್ಡ್</td><td>2</td><td>2</td><td>2</td></tr>
<tr><td>4 ಕಾರ್ಡ್</td><td>6</td><td>7</td><td>8</td></tr>
</table>
ಇಲ್ಲಿ ನಾವು ನೂರರ ಸ್ಥಾನದಲ್ಲಿರುವಂತಹ ಅಂಕೆಗಳನ್ನು ಹೋಲಿಸುವುದು ಆಗ. 4, 9, 2, 6ರಲ್ಲಿ ಕನಿಷ್ಠ ಸಂಖ್ಯೆ [2] ಗರಿಷ್ಠ ಸಂಖ್ಯೆ [9.] ಆದ್ದರಿಂದ ಕನಿಷ್ಠ ಸಂಖ್ಯೆ [222] ಗರಿಷ್ಠ ಸಂಖ್ಯೆ [906.] ಈಗ ನಾವು 3ನೇ ಕಾರ್ಡ್‌ನಲ್ಲಿ ಕನಿಷ್ಠ ಸಂಖ್ಯೆ 2ನೇ ಕಾರ್ಡ್‌ನಲ್ಲಿ ಗರಿಷ್ಠ ಸಂಖ್ಯೆ ಇದೆ ಎಂದು ತಿಳಿಸಿ ಎಲ್ಲಾ ಮಕ್ಕಳನ್ನು ಬಳಸಿ ಚಟುವಟಿಕೆ ಮುಂದುವರೆಸುವರು.</td><td colspan="5">5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ</td></tr>
</table>

<table>
<tr><th rowspan="2">ಅವಧಿ</th><th rowspan="2">ಸಮಯ ಹಂಚಿಕೆ</th><th colspan="5">ಮೂರನೇ ತರಗತಿ</th><th colspan="5">ಐದನೇ ತರಗತಿ</th></tr>
<tr><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td><td>10</td><td>11</td><td>12</td></tr>
<tr><td rowspan="2">4ನೇ ಅವಧಿ</td><td>20 ನಿ<br>40 ನಿ</td><td rowspan="2">ಪರಿಸರ ಅಧ್ಯಯನ<br>ಪ್ರಾಣಿ ಪ್ರಪಂಚ</td><td rowspan="2">* ಪ್ರಾಣಿಗಳ ವಾಸಸ್ಥಳ, ದೇಹದ ಗಾತ್ರ, ಆಕಾರಗಳನ್ನು ಗುರುತಿಸುವರು.<br>* ಪ್ರಾಣಿಗಳ ಆಹಾರಾಭ್ಯಾಸದ ಆಧಾರದ ಮೇಲೆ ವಿಂಗಡಿಸುವರು.<br>* ಪ್ರಾಣಿಗಳ ಆಹಾರಾಭ್ಯಾಸಗಳನ್ನು ತಿಳಿಯುವರು.<br>* ಮಾನವರಿಗೂ ಪ್ರಾಣಿಗಳಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅರಿಯುವರು.</td><td rowspan="2">* ವಿವಿಧ ಪ್ರಾಣಿಗಳ ಚಿತ್ರಪಟಗಳು</td><td rowspan="2">ಶಿಕ್ಷಕರು</td><td>ಹಿಂದಿನ ಅವಧಿಯಲ್ಲಿ ಪಟ್ಟಿ ಮಾಡಲಾದ ಪ್ರಾಣಿಗಳನ್ನು ಸಾಕುಪ್ರಾಣಿಗಳು ಮತ್ತು ಸಾಕದೇ ಇರುವ ಪ್ರಾಣಿಗಳು ಎಂದು ವಿಂಗಡಿಸಿ ಬರೆಯಿರಿ ಎಂದು ತಿಳಿಸುವರು.<table><tr><th>ಸಾಕುವ ಪ್ರಾಣಿಗಳು</th><th>ಸಾಕದೆ ಇರುವ ಪ್ರಾಣಿಗಳು</th></tr><tr><td></td><td></td></tr></table>ಸಾಕದೇ ಇರುವ ಪ್ರಾಣಿಗಳು ಎಲ್ಲಿ ಕಂಡು ಬರುತ್ತವೆ? ಹೊಲಗದ್ದೆ ರಸ್ತೆಗಳಲ್ಲಿ ಮತ್ತು ನಮ್ಮ ಮನೆಗಳಲ್ಲೂ ಇವೆಯಲ್ಲವೇ?<br>ಉದಾ : ನಾವು ಸಾಕದೇ ಇರುವ ಪ್ರಾಣಿಗಳನ್ನು ವನ್ಯಜೀವಿಗಳು ಎಂದು ಕರೆಯುತ್ತೇವೆ. ಕಾಡಿನಲ್ಲಿ ವಾಸಿಸುವ ಪ್ರಾಣಿಗಳನ್ನು ಕಾಡುಪ್ರಾಣಿಗಳು, ನಾವು ಸಾಕುವ ಪ್ರಾಣಿಗಳನ್ನು ಸಾಕು ಪ್ರಾಣಿಗಳು ಎಂದು ಕರೆಯುತ್ತೇವೆ ಎಂದು ತಿಳಿಸುವರು.</td><td rowspan="2"></td><td rowspan="2"></td><td rowspan="2" colspan="3">5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ</td></tr>
<tr><td>20 ನಿ</td><td>ವಿವಿಧ ಪ್ರಾಣಿಗಳ ಚಿತ್ರಪಟಗಳನ್ನು ತೋರಿಸಿ ಇದು ಸಾಕು ಪ್ರಾಣಿಯೇ? ಸಾಕದೇ ಇರುವ ಪ್ರಾಣಿಯೇ? ಎಂದು ಸಣ್ಣ ಸಣ್ಣ ಪ್ರಶ್ನೆ ಕೇಳುತ್ತಾ ಸಾಕುವ ಪ್ರಾಣಿಗಳು ಹಾಗೂ ಸಾಕದೆ ಇರುವ ಪ್ರಾಣಿಗಳನ್ನು ಗುರುತಿಸುವಂತೆ ತಿಳಿಸುವರು.</td></tr>
</table>

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 40 ನಿ | ಕನ್ನಡ : ನಿಯಮ ಪಾಲನೆ | * ಪದಗಳ ನಡುವೆ ಇರುವ ಅರ್ಥಪೂರ್ಣ ಸಂಬಂಧವನ್ನು ಅರಿಯುವುದು.<br>* ರಸ್ತೆ ಚಿನ್ಹೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | ಅಪಘಾತ ರೂಪಕದ ಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ**<br>ರಸ್ತೆ ಅಪಘಾತದ ಬಗ್ಗೆ ಒಂದು ರೂಪಕ ಚಟುವಟಿಕೆಯನ್ನು ರೂಪಿಸಿ ಮಕ್ಕಳಿಂದ ಮಾಡಿಸುವರು.<br>ನಂತರ ರೂಪಕದಿಂದ ತಿಳಿದ ಉತ್ತಮ ಅಂಶಗಳು ಮತ್ತು ದುಷ್ಪರಿಣಾಮಗಳ ಬಗ್ಗೆ ಚರ್ಚಿಸುವರು. | ಕನ್ನಡ : ಸಂಗೊಳ್ಳಿ ರಾಯಣ್ಣ | * ನಿರರ್ಗಳವಾಗಿ ಹಾಗೂ ಸಹಜವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | ಅಭ್ಯಾಸ ಹಾಳೆ | ಹಿರೇಮಣಿ | ಹಿರೇಮಣಿ ಸಹಕಾರದೊಂದಿಗೆ ಅಭ್ಯಾಸದ ಹಾಳೆಯಲ್ಲಿರುವ ಪುಟಸಂಖ್ಯೆ 13 ಮತ್ತು 14ರಲ್ಲಿರುವ ಅ ಯಿಂದ ಋ ವರೆಗಿನ ಎಲ್ಲ ಅಭ್ಯಾಸಗಳನ್ನು ಮಾಡುವನು.<br>ಮಕ್ಕಳು ಹಿರೇಮಣಿ ಹೇಳಿದಂತೆ ತಪ್ಪಿಲ್ಲದೆ ಬರೆಯುವರು. |
| | 30 ನಿ | | | | ಶಿಕ್ಷಕರು | **ಕಲಿಕಾಂಶ (ನೇರ ಬೋಧನೆ)**<br>ರವಿ ಮತ್ತು ರಾಧ ..........................................<br>..........................................................................<br>............................ ಮೂವರು ಶಾಲೆಗೆ ಹೊರಟರು.<br>ಈ ಗದ್ಯಭಾಗವನ್ನು ಸ್ವರಭಾರ ಏರಿಳಿತದೊಂದಿಗೆ ಶಿಕ್ಷಕರು ಓದುವರು. ಮಕ್ಕಳು ಆಲಿಸುವರು. | | | | | |
| | 10 ನಿ | | | | ಹಿರೇಮಣಿ | ಹಿರೇಮಣಿ ಒಬ್ಬೊಬ್ಬ ವಿದ್ಯಾರ್ಥಿಗೆ ಕ್ರಮವಾಗಿ ಓದಿಸುವನು. | ಜೀವನ ವಿಜ್ಞಾನ<br>ಪ್ರಾಸ ಗೀತೆಗಳ ಸಂಗ್ರಹ | * ಸ್ಥಳೀಯ ಪ್ರಾಸ ಗೀತೆಗಳ ಸಂಗ್ರಹ | ಪ್ರಾಸ ಗೀತೆಗಳ ಸಂಗ್ರಹ ಹಾಳೆ | ಹಿರೇಮಣಿ<br>ಶಿಕ್ಷಕರು | ಹಿರೇಮಣಿಯ ಸಹಕಾರದಿಂದ ಮಕ್ಕಳಿಗೆ ಗೊತ್ತಿರುವ ಸ್ಥಳೀಯ ಚಿಕ್ಕ–ಚಿಕ್ಕ ಪ್ರಾಸ ಗೀತೆಗಳನ್ನು ಸಂಗ್ರಹಿಸಿ ಹೇಳಿಸುವರು.<br>ಮಕ್ಕಳು ಸಂಗ್ರಹಿಸಿದ ಪ್ರಾಸ ಗೀತೆಗಳನ್ನು ಪರಿಶೀಲಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 40 ನಿ | ಜೀವನ ವಿಜ್ಞಾನ : ವೈಯಕ್ತಿಕ ಸ್ವಚ್ಛತೆ | * ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದು.<br>* ಸ್ವಚ್ಛತಾ ಉಪಕರಣಗಳ ಬಗ್ಗೆ ತಿಳಿಯುವುದು. | ವೈಯಕ್ತಿಕವಾಗಿ ಸ್ವಚ್ಛತೆಯ ಬಗ್ಗೆ ಜಾಗೃತಗೊಳಿಸುವ ಫಲಕಗಳು | ಹಿರೇಮಣಿ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಎಲ್ಲಾ ಮಕ್ಕಳನ್ನೂ ಹಿರೇಮಣಿ ಪರೀಕ್ಷಿಸುವನು.<br>ಉದಾ : ತಲೆಬಾಚುವುದು, ಉಗುರು ಕತ್ತರಿಸುವುದು, ಹಲ್ಲು ಉಜ್ಜದಿರುವುದು, ಕೈಕಾಲು ತೊಳೆಯದಿರುವುದು ಇವುಗಳ ಬಗ್ಗೆ ಗಮನವಿಟ್ಟು ಪರೀಕ್ಷಿಸುವುದು. ಶಿಕ್ಷಕರು ವೈಯಕ್ತಿಕ ಸ್ವಚ್ಛತೆ ಬಗ್ಗೆ ತಿಳುವಳಿಕೆ ಹೇಳುವರು. | ಗಣಿತ<br>ವಿವಿಧ ಸಂಖ್ಯೆಗಳು ಮತ್ತು ಸಂಖ್ಯಾ ಗಣಗಳು | | ಮಿಂಚುಪಟ್ಟಿ | ಶಿಕ್ಷಕರು | ಪ್ರತಿ ಮಕ್ಕಳಿಗೆ ಎರಡು ಅಥವಾ ಮೂರು ಕನ್ನಡ ಮತ್ತು ರೋಮನ್ ಸಂಖ್ಯಾ ಸೂಚಕಗಳ ಮಿಂಚುಪಟ್ಟಿಗಳನ್ನು ಕೊಟ್ಟು ಆ ಸಂಖ್ಯಾ ಸೂಚಕಗಳನ್ನು ನೆಲದ ಮೇಲೆ ಬರೆದು ಅವುಗಳಿಗೆ ಕಲ್ಲುಗಳನ್ನು ಜೋಡಿಸುವುದರ ಮೂಲಕ ಸಂಖ್ಯಾ ಸೂಚಕಗಳ ಸ್ಪಷ್ಟ ಕಲ್ಪನೆ ಮೂಡಿಸುವರು. ಇದೇ ಮಿಂಚು ಪಟ್ಟಿಗಳನ್ನು ಮಕ್ಕಳು ಅದಲು ಬದಲು ಮಾಡಿಕೊಂಡು ಚಟುವಟಿಕೆ ಮುಂದುವರಿಸುವುದು. |
| | 40 ನಿ | | | | ಶಿಕ್ಷಕರು | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಮತ್ತು ಅವುಗಳ ದುಷ್ಪರಿಣಾಮ ಮತ್ತು ಅನುಕೂಲಗಳ ಬಗ್ಗೆ ವಿವರವಾಗಿ ಉದಾಹರಣೆ ಸಹಿತ ವಿವರಿಸುವುದು.<br>ಮಕ್ಕಳಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸೂಚನೆಗಳನ್ನು ಮಕ್ಕಳಿಗೆ ಕೊಡುವರು. | ಜೀವನ ವಿಜ್ಞಾನ : ವೈಯಕ್ತಿಕ ಸ್ವಚ್ಛತೆ | | | ಶಿಕ್ಷಕರು | ಮೂರನೇ ತರಗತಿಗೆ ಹೇಳಿದ ವಿಷಯವನ್ನು ಈ ಮಕ್ಕಳೂ ಆಲಿಸುವರು. ಕೇಳಿದ ಸರಳ ಪ್ರಶ್ನೆಗಳಿಗೆ ಉತ್ತರಿಸುವರು.<br>ಸೂಚನೆಗಳನ್ನು ಆಲಿಸುವರು. |